ಇಂಧನ ಮರಗಳ ಅಭಿವೃದ್ಧಿಗಾಗಿ ಒಟ್ಟು ರೂ 3.0 ಕೋಟಿಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿವೆ. ಈ ಪ್ರಸ್ತಾವನೆಯಲ್ಲಿ ಕೆಳಕಂಡ ಕಾರ್ಯಕ್ರಮಗಳಿರುತ್ತವೆ ;

1. ರಾಜ್ಯದಲ್ಲಿ ಹೊಂಗೆ ಜೊತೆಗೆ ಜತ್ರೋವಾ, ಬೇವು ಮತ್ತು ಹಿಪ್ಪೆಯ ಉತ್ಕೃಷ್ಟ ಮರಗಳನ್ನು ಗುರುತಿಸುವುದು.

2. ಅಧಿಕ ಪ್ರಮಾಣದಲ್ಲಿ ಈ ನಾಲ್ಕು ಮರಗಳ ಸಸಿಗಳ ಉತ್ಪಾದನೆಗಾಗಿ ಕಸಿ ಕಟ್ಟುವಿಕೆ ಹಾಗೂ ಅಲೈಂಗಿಕ (clonally) ಪದ್ಧತಿಗಳ ತಾಂತ್ರಿಕತೆಯನ್ನು ಕ್ರಮಬದ್ಧಗೊಳಿಸುವುದು.

3. ಈ ಎರಡು ವಿಧಾನಗಳಿಂದ ಅಭಿವೃದ್ಧಿ ಪಡಿಸಿದ ನಾಲ್ಕು ಜಾತಿಯ ಮರಗಳ ಸಸಿಗಳನ್ನು ಉತ್ಪಾದನೆ ಮಾಡಿ ಸರಬರಾಜು ಮಾಡುವುದು.

4. ಈ ಎರಡೂ ವಿಧಾನಗಳಿಂದ ಅಭಿವೃದ್ಧಿ ಪಡಿಸಿದ ಸಸಿಗಳ ಬಗ್ಗೆ ರೈತರಿಗೆ ಪ್ರಚಾರ ತರಬೇತಿ ನೀಡುವುದು ಹಾಗೂ ಅವರ ಹೊಲಗಳಲ್ಲಿ ಬೆಳಸುವುದು.

5. ಸ್ಥಾನೀಯ ಯುವಕರಿಗೆ ಎಣ್ಣೆ ಉತ್ಪಾದನೆ, ವಿವಿಧ ಉತ್ಪನ್ನಗಳು ಮಾರಾಟ, ಎಣ್ಣೆಯನ್ನು ಇಂಜಿನುಗಳಲ್ಲಿ ಬಳಕೆ ಹಾಗೂ ಇಂಜಿನ್ನುಗಳ ನಿರ್ವಹಣೆ ಬಗ್ಗೆ ತರಬೇತಿ ನೀಡುವುದು.

ಈಯೋಜನೆಯಡಿಯಲ್ಲಿ ಮೇಲಿನ ವಿವಿಧ ಸಂಸ್ಥೆಗಳ ಮೂಲಕ ಒಟ್ಟು ರೂ. 50 ಲಕ್ಷ ಉತ್ಕೃಷ್ಟ ಹೊಂಗೆ ಸಸಿಗಳನ್ನು ಉತ್ಪಾದಿಸಿ, ರೈತರಿಗೆ ನಾಟಿ ಮಾಡಲು ಒದಗಿಸಲು ಕ್ರಮ ಕೈಗೊಂಡಿದೆ. ಇದಕ್ಕೆ ಒಟ್ಟು 2 ಸಾವಿರ ಉತ್ಕೃಷ್ಟ ಹೊಂಗೆ ಮರಗಳನ್ನು ಗುರುತಿಸಿ, ಬೀಜ ಶೇಖರಣೆ ಮಾಡಲು ಸೂಕ್ತ ಮಾರ್ಗದರ್ಶನ ನೀಡಿದ್ದು, ಕ್ರಮ ಕೈಗೊಂಡಿರುತ್ತಾರೆ. ಸದರಿ ಬೀಜಗಳಿಂದ ಉತ್ಕೃಷ್ಟ ಹೊಂಗೆ ಸಸಿಗಳನ್ನು ತಯಾರಿಸಲಾಗುವುದು. ಮೇಲಿನ ಸಂಸ್ಥೆಗಳು ಹಾಗೂ ಸ್ವಸಹಾಯ ಗುಂಪುಗಳ ಮೂಲಕ ರೈತರ ಜಮೀನುಗಳಲ್ಲಿ ನಾಟಿ ಮಾಡಲು ಅವರಿಗೆ ಒದಗಿಸಲಾಗುವುದು ಹಾಗೂ ರಾಜ್ಯದ ಬರಡು ಭೂಮಿ, ಬೀಳು ಭೂಮಿ, ನಗ್ನಾವಸ್ಥೆಯಲ್ಲಿರುವ ಅರಣ್ಯಗಳು, ಸಸ್ಯವಿಲ್ಲದೆ ಗುಡ್ಡಗಾಡು ಮತ್ತು ಕಡಿಮೆ ಇಳುವರಿ ನೀಡುವ ಖುಷ್ಕಿ ಜಮೀನುಗಳಲ್ಲಿ ಈ ಸಸಿಗಳನ್ನು ನಾಟಿ ಮಾಡಲಾಗುವುದು.

ಇ) ಇಲ್ಲ

ಈ) ಅನ್ವಯಿಸುವುದಿಲ್ಲ.

777(726) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಆಶ್ರಯ/ಅಂಬೇಡ್ಕರ್ ಮತ್ತು ವಾಂಬೇ ಯೋಜನೆಯಡಿ ಮನೆ ಸಾಲ ಪಡೆದ ಫಲಾನಿಭವಿಗಳ ಮನೆ ಸಾಲದ ಮೇಲಿನ ಬಡ್ಡಿ ದರವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ವಿಧಿಸುವ ಬಡ್ಡಿ ದರಕ್ಕೆ ಸಮನಾಂತರವಾಗಿ ವಿಧಿಸಲು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ವಿತರಿಸಲಾದ ಸಾಲದ ಮೇಲಿನ ಬಡ್ಡಿಗೂ ಅನ್ವಯಿಸಬೇಕು ಎಂಬುದರ ಬಗ್ಗೆ ಸರ್ಕಾರದ ನಿಲುವೇನು ;

ಆ) ಈ ಸಂಬಂಧ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಅಂಜನಾಮೂರ್ತಿ (ವಸತಿ ಸಚಿವರು)

ಅ) ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ವಿಧಿಸುವ ಬಡ್ಡಿದರಕ್ಕೆ ಸಮಾನಾಂತರವಾಗಿ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದ ಫಲಾನುಭವಗಳ ಮನೆ ಸಾಲದ ಮೇಲಿನ ಬಡ್ಡಿಗೂ ಸಹ ಅನ್ವಯಿಸಬೇಕೆಂಬುದೇ ಸರ್ಕಾರದ ನಿಲುವಾಗಿದೆ. ಅದರಂತೆಯೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ

ಕಾಲಕಾಲಕ್ಕೆ ಬದಲಾಗುವ ಬಡ್ಡಿ ದರದಂತೆ ಹುಡ್ಕೋ ಸಂಸ್ಥೆಯೂ ಸಹ ತನ್ನ ದರಗಳನ್ನು ಕಡಿಮೆ ಮಾಡುತ್ತಾ ಬರುತ್ತದೆ.

ಆ) ರಾಷ್ಟ್ರೀಕೃತ ಬ್ಯಾಂಕ್ ಕಾಲಕಾಲಕ್ಕೆ ನಿಗಧಿ ಪಡಿಸುತ್ತಿರುವ ಬಡ್ಡಿದರವನ್ನೇ ಹುಡ್ಕೋ ಸಂಸ್ಥೆಯು ಅನುಸರಿಸುತ್ತಿರುವುದರಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

778(1331) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ದಿನಾಂಕ 31–12–2004ರ ಅಂತ್ಯಕ್ಕೆ ಅಬಕಾರಿ ಗುತ್ತಿಗೆದಾರರಿಂದ ಬೊಕ್ಕಸಕ್ಕೆ ಬರಬೇಕಾದ ಬಾಕಿ ಹಣ ಎಷ್ಟು ? ಬಾಕಿ ವಸೂಲಿಗಾಗಿ ತೀವ್ರ ಕ್ರಮ ಕೈಗೊಂಡಿಲ್ಲವೇ ?

ಆ) ಶ್ರೀ ರವಿಕುಮಾರ್ ಟ್ರೇಡರ್, ಬೆಂಗಳೂರು ಇವರಿಂದ ಬಾಕಿ ಬರಬೇಕಾದ ಹಣ ಎಷ್ಟು? (ಅಸಲು + ಬಡ್ಡಿ ಸಹಿತ) ಈ ಮೊತ್ತದ ಬಾಕಿ ಉಳಿಸಿಕೊಂಡಿರುವುದನ್ನು ವಸೂಲಿ ಮಾಡಲು ಭೂ ಕಂದಾಯ ಕಾಯ್ದೆ ಅನ್ವಯ, ಚರ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಕೈಗೋಂಡಿರುವ ಕ್ರಮಗಳೇನು :

ಇ) ಇದೇ ರೀತಿ ಕೋಟಿ ರೂ. ಗೂ ಮಿಗಿಲಾಗಿ ಬಾಕಿ ಹಣ ಉಳಿಸಿಕೊಂಡಿರುವ ಗುತ್ತಿಗೆದಾರರೆಷ್ಟು; ಅವರಲ್ಲಿ ಮೂರು ವರ್ಷಗಳಿಗೂ ಮೀರಿ ಬಾಕಿ ಉಳಿಸಿಕೊಂಡಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ. ಅವರನ್ನು ಗುತ್ತಿಗೆ ಪಡೆಯಲು ಅನರ್ಹರೆಂದು ಘೋಷಿಸಲಾಗಿದೆಯೇ ಇಲ್ಲವಾದಲ್ಲಿ ಅದಕ್ಕಿರುವ ಅಡಚಣೆ ಏನು (ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ(ಉಪ ಮುಖ್ಯಮಂತ್ರಿಗಳು) :

ಅ) ದಿನಾಂಕ : 31–3–2004ರ ಅಂತ್ಯಕ್ಕೆ ಅಬಕಾರಿ ಗುತ್ತಿಗೆದಾರರಿಂದ ಬೊಕ್ಕಸಕ್ಕೆ ಬರಬೇಕಾದ ಬಾಕಿ ಹಣ ಕೆಳಕಂಡಂತಿದೆ.

ಅಸಲು ರೂ. 278.19 ಕೋಟಿಗಳು

ಬಡ್ಡಿ ರೂ. 352.19 ಕೋಟಿಗಳು

ಒಟ್ಟು ರೂ. 630.38 ಕೋಟಿಗಳು

ವಿವರವನ್ನು ಅನುಬಂಧ–1ರಲ್ಲಿ ಒದಗಿಸಿದೆ.

ಬಾಕಿ ವಸೂಲಾತಿಗೆ ತೀವ್ರ ಕ್ರಮ ಕೈಗೊಳ್ಳಲಾಗಿದೆ.

ಆ) ದಿನಾಂಕ: 31–3–2004ರ ಅಂತ್ಯಕ್ಕೆ ಮೆಃ ಶ್ರೀ ರವಿಕುಮಾರ್ ಟ್ರೇಡರ್ಸ್ ಇವರಿಂದ ಅಸಲು ರೂ. 11,58,85,811–00 ಮತ್ತು ಬಡ್ಡಿ ರೂ. 26,62,86,831–00 ಬಾಕಿ ಇರುತ್ತದೆ.

ಮೆಃ ಶ್ರೀ ರವಿಕುಮಾರ್ ಟ್ರೇಡರ್ಸ್ ಇವರು ಹೊಂದಿರುವ ಸ್ಥಿರಾಸ್ತಿಯನ್ನು ಸಾರ್ವಜನಿಕವಾಗಿ ಹರಾಜು ಮಾಡಲು ಉದ್ದೇಶಿಸಲಾಗಿದೆ.

ಇ) ವಿವರವನ್ನು ಅನುಬಂಧ–2ರಲ್ಲಿ ಒದಗಿಸಿದೆ. ಬಾಕಿ ಉಳಿಸಿಕೊಂಡಿರುವ ಗುತ್ತಿಗೆದಾರರನ್ನು ಸುಸ್ತಿದಾರರ ಪಟ್ಟಿಯಲ್ಲಿ ಸೇರಿಸಲಾಗುವುದು. ಹಾಗೂ ಸದರಿ ಗುತ್ತಿಗೆದಾರರನ್ನು ನಂತರದ ಅಬಕಾರಿ ಹರಾಜಿನಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದಿಲ್ಲ.